ಬದುಕಿನ ಸುಂದರತೆಯ ಕಲ್ಪನೆಯೇ ನಿನಗಿಲ್ಲವೆ? ನನ್ನಮ್ಮ, ನನ್ನ ಅಕ್ಕ ಎಷ್ಟು ಸಂತೋಷದಿಂದಿದ್ದಾರೆ ಗೊತ್ತುಂಟಾ? ನಿಮ್ಮಂತಹ ಶ್ರೀಮಂತರು, ತಿಳಿದವರು, ಉಚ್ಚಮಟ್ಟದವರು ಅವರನ್ನು 'ಜಾಹಿಲಿ'ಗಳು (ನಿಕೃಷ್ಟರು), ದೀನ್ (ಧರ್ಮ)ನಂತೆ ನಡೆಯದವರೆಂದು ಜರೆಯುತ್ತಾರೆ. ಆದರೂ ಅವರೆಷ್ಟು ಸುಖವಾಗಿ ನಿದ್ರಿಸುತ್ತಾರೆ ಗೊತ್ತುಂಟಾ?'

'ನಿನ್ನಮ್ಮ, ಅಕ್ಕನಿಗೆ ಇರುವ ಸ್ವಾತಂತ್ರ್ಯ ನನಗೆ ಇಲ್ಲ ಅಬ್ದುಲ್ಲಾ. ಈ ಪಾಚಿಗಟ್ಟಿದ ಸಂಪ್ರದಾಯಗಳೊಂದಿಗೆ ರಾಜಿ ಮಾಡಿಕೊಳ್ಳೋದು ನನ್ನಿಂದ ಸಾಧ್ಯವಲ್ಲ. ನನಗೆ ಬದುಕು ಬೇಕು, ಗೊಡ್ಡು ಸಂಪ್ರದಾಯಗಳಲ್ಲ. ನನಗೆ ಸುಖವಾದ ನಿದ್ದೆ ಬೇಕು, ಅಧಿಕಾರವಲ್ಲ. ನನಗೆ ಸಂಗಾತಿಬೇಕು, ಮೇಸ್ತ್ರಿಯಲ್ಲ. ಇದೇ ವಾದವನ್ನು ಹೂಡಿ ಗಂಡನಿಂದ ಕತ್ತು ಹಿಡಿಸಿ, ದಬ್ಬಿಸಿಕೊಂಡು ಪುನಃ ಈ ಮನೆಗೆ ಬಂದು ಬಿದ್ದದ್ದು.'

ಅಬ್ದುಲ್ಲಾ ಸಲ್ಮಾಳ ಮಾತಿನ ಬಿರುಸಿನಿಂದ ತತ್ತರಿಸಿಹೋದ– ತಾನು ಕೊಟ್ಟ ತನ್ನ ಅಮ್ಮ, ಅಕ್ಕನ ಉದಾಹರಣೆ ತನ್ನ ವಿರುದ್ಧ ಸಲ್ಮಾಳ ಪರವಾಗಿ ಕೆಲಸ ಮಾಡಿದ ಪರಿಯನ್ನು ನೋಡಿ.

'ನೀನು ಇಷ್ಟಪಟ್ಟದ್ದರಿಂದಲೇ ಅಲ್ಲವೇ ನಿನ್ನನ್ನು ಸಂಬಂಧಿಕರಲ್ಲೇ ನಿನ್ನ ತಂದೆ ಮದುವೆ ಮಾಡಿಕೊಟ್ಟಿದ್ದು?' ಅಬ್ದುಲ್ಲಾ ಸರಳವಾಗುತ್ತಾ ಹೋಗುತ್ತಿದ್ದ, ನೀರಾಗುತ್ತಾ...

'ಪರಿಚಿತರು ನನ್ನನ್ನು ಅರ್ಥಮಾಡಿಕೊಳ್ಳುತ್ತಾರೆಂಬ ಮೂರ್ಖ ಭರವಸೆ ನನಗಾಗ ಇದ್ದುದರಿಂದಲೇ ನಾನಿಷ್ಟು ನರಳಬೇಕಾಯಿತು. ಇಲ್ಲವಾದರೆ ಹೇಗೋ ಏನೋ ಆಗುತ್ತಿತ್ತು. ಮುಖ್ಯ ನನ್ನ ತಂದೆ ನನಗೆ ವಿದ್ಯೆ ಕೊಡಿಸಬಾರದಾಗಿತ್ತು. ಸರಿ, ತಪ್ಪು, ಅನ್ಯಾಯ, ನ್ಯಾಯ, ಶೋಷಣೆ ಮುಂತಾದವುಗಳ ಬಗ್ಗೆ ನನಗೆ ತಿಳಿವಳಿಕೆ ಮೂಡಬಾರದಾಗಿತ್ತು. ಇಲ್ಲವಾಗಿದ್ದರೆ ಪಕ್ಕದ ಮನೆಯ ಹಲಿಮಳಂತೆಯೇ ಬುರ್ಖಾ ಹಾಕಿಕೊಂಡು ಗಂಡನ ಮುಂದೆ ಅವನ ಹೆಜ್ಜೆಯ ಗುರುತಿನ ಅಳಿಸದಂತೆ ನನ್ನ ಹೆಜ್ಜೆಯನ್ನು ಜಾಗ್ರತೆ ಇಟ್ಟು ನಡೆಯುತ್ತಿದ್ದೆ.'

'ಇಲ್ಲಿ ನಿನಗೆ ತಾಯಿ ಇಲ್ಲದ ಕೊರತೆ ಎದ್ದು ಕಾಣುತ್ತಿದೆ ಸಲ್ಮಾ. ಗಂಡನೊಡನೆ ಸಮರಸದ ಬಾಳುವೆ ನಡೆಸಿ ಅದೆಷ್ಟು ಮಂದಿ ಬಾಳಿನ ಸುಖವನ್ನೆಲ್ಲಾ ಉಂಡು ನೆಮ್ಮದಿಯಿಂದಿದ್ದಾರೆಂಬ ಬಗ್ಗೆ ನಿನಗೆ ತಿಳಿದಿಲ್ಲ.'

'ನಾನು ಕಾಲಿಟ್ಟ ಮನೆಯಲ್ಲಿ ಸಮರಸಕ್ಕೆ ಅರ್ಥವೇನಿತ್ತು ಗೊತ್ತೇ? ದಾಸ್ಯ, ಬರೇ ದೈಹಿಕ ದಾಸ್ಯ ಮಾತ್ರವಲ್ಲ, ವೈಚಾರಿಕ ವ್ಯಭಿಚಾರ ಕೂಡಾ. ಅತ್ತೆಗೆ ಬೇಕಿದ್ದದ್ದು ಮಗನಿಗೆ ಹೆಂಡತಿಯಲ್ಲ, ಮನೆಯ ಜವಾಬ್ದಾರೀ ಹೊರ ಬಲ್ಲ ಹೆಣ್ಣಾಳು. ಗಂಡನಿಗೆ ಬೇಕಿದ್ದದ್ದು ದಾಸಿ, ಚಂದದ ಕಾಮದ ಬೊಂಬೆ. ಮಾವನಿಗೆ ಬೇಕಾದದ್ದು ವ್ಯವಹಾರದಲ್ಲಿ ನನ್ನ ಶ್ರೀಮಂತ ಅಪ್ಪನ ಬಲಿಷ್ಠ ಕೈಗಳ ಆಸರೆ. ಜತೆಗೆ ನನ್ನ ಹಿಂದೆ ಬರಲಿರುವ ಆಸ್ತಿ, ಹಣ, ಬಂಗಾರ.'

ಅಬ್ದುಲ್ಲಾ ಏನೂ ಹೇಳದಾದ. ಅವಳೇ ಮುಂದುವರಿಸಿದಳು.

'ಇಷ್ಟೆಲ್ಲಾ ಹಗರಣಕ್ಕೆ, ಅವರು ಮೂರು ತಲಾಕ್ ಕೂಡ ಕೊಟ್ಟು ನನ್ನ ಸಂಬಂಧ ಕಡಿದು ಹಾಕಿದ ಕಾರಣ ಗೊತ್ತೇ? ನನ್ನ ಗೆಳತಿ ಗೀತಾ ಎಕ್ಸಿಡೆಂಟ್ ಆಗಿ ಹಾಸ್ಪಿಟಲ್‌ಗೆ ಎಡ್ಮಿಟ್ ಆಗಿದ್ದಾಳೆಂತ ವರ್ತಮಾನ ತಿಳಿದು, ಅವಳನ್ನು ನನಗೆ ನೋಡಬೇಕೆನಿಸಿತು. ಮನೆಯಲ್ಲಿ ಅತ್ತೆ ಮಾತ್ರ ಇದ್ದರು. ಗಂಡಸರಾರೂ ಇರಲಿಲ್ಲ. ನಾನು ಹೊರಡುವಾಗ ಅತ್ತೆ ಗೊಣಗಿದರು. ನನಗೆ ಗೆಳತಿಯನ್ನು ನೋಡುವುದೇ ಮುಖ್ಯವೆನಿಸಿದ್ದರಿಂದ ಟ್ಯಾಕ್ಸಿ ಮಾಡಿಕೊಂಡು ಹೊರಟೆ. ಅವಳನ್ನು ನೋಡಿ ಹಿಂದಿರುಗಿದಾಗ ದೊಡ್ಡ ಗಲಾಟೆಯೇ ಆಯಿತು. ಗಂಡನ ಪರ್ಮಿಶನ್ ಪಡೆಯದೆ ಹೋದದ್ದು ದೊಡ್ಡ ಅಪರಾಧವಾಯಿತು. ಅಷ್ಟರವರೆಗೆ ಸಿಡಿಯುತ್ತಿದ್ದ ಕಿಡಿ ಬೆಂಕಿ ಹತ್ತಿ